**LAC(A) 78/2018**
**PW-1**

**ದಿನಾಂಕ** 15-02-2025 **ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ- ಅರ್ಜಿದಾರರ ಪರ ವಕೀಲರಿಂದಃ-**

**ಈ ಕೇಸಿನಲ್ಲಿ ನಾನು ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಭಾಗವಾಗಿ ಈ ದಿನ ಪ್ರಮಾಣಪತ್ರ ಸಲ್ಲಿಸುತ್ತಿದ್ದೇನೆ. ಪ್ರಮಾಣಪತ್ರದಲ್ಲಿರುವ ಮಾಹಿತಿ ಸರಿ ಇದ್ದು ನಾನು ಅದಕ್ಕೆ ಸಹಿ ಮಾಡಿರುತ್ತೇನೆ.**

Ex.P-1-Certified copy of Judgment in LAC No. 25/2018

Ex.P-2-Certified copy of Judgment in LAC No. 175, 176/2002

Ex.P-3-Death Certificate of Malamma

Ex.P-4-Survival certificate

**ಪಾಟೀಸವಾಲುಃ- ಎದುರುದಾರರ ಪರ ಎ ಡಿ ಜಿ ಪಿಯವರಿಂದಃ-**

ನಾನು ಹಸುವಿನ ಕಾವಲು ಗ್ರಾಮದ ವಾಸಿ. ಭೂಸ್ವಾಧೀನವಾದ ನನ್ನ ಜಮೀನಿನ ಸರ್ವೇ ನಂ. 42 ಹಾಗೂ ಕ್ಷೇತ್ರ 2 ಎಕರೆ 10 ಗುಂಟೆ. ನನ್ನ ಗಂಡ ಬದುಕಿದ್ದಾಗ ಅಂತಿಮ ಪರಿಹಾರ ಪಡೆದಿದ್ದಾನೆ ಎನ್ನುವುದು ನಿಜ. ಸದರಿ ಜಮೀನು ಯಾವ ದಿನಾಂಕದಂದು ಭೂಸ್ವಾಧೀನಾವಾಗಿದೆ ಎಂದು ನನಗೆ ಹೇಳಲು ಬರುವುದಿಲ್ಲ. ನನ್ನ ಗಂಡ 2 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ಗಂಡನ ಅಸಲು ಮರಣಪ್ರಮಾಣ ಪತ್ರ ಹಾಗೂ ವಂಶವೃಕ್ಷ ಕೊಡಲು ಯಾವುದೇ ತೊಂದರೆ ಇಲ್ಲ. ನಾನು ಜೀವಂತ ಸದಸ್ಯರ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಕೃಷ್ಣೇಗೌಡರ ವಾರಸುದಾರಳು ಅಲ್ಲ , ಆದ ಕಾರಣ ಮೂಲ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನಮ್ಮ ಗ್ರಾಮದ ಚಿಕ್ಕಮ್ಮ ಎನ್ನುವರವರಿಗೆ ಹೆಚ್ಚಿನ ಪರಿಹಾರ ಬಂದಿರುತ್ತದೆ. ಸದರಿ ಯವರ ಜಮೀನಿನ ಸರ್ವೇ ನಂ, ಎಷ್ಟು ಪರಿಹಾರ ಬಂತು ವಗೈರೆ ನನಗೆ ಗೊತ್ತಿಲ್ಲ. ನನ್ನ ಗಂಡನ ಜೀವಿತ ಕಾಲದಲ್ಲಿ ಚಿಕ್ಕಮ್ಮರವರಿಗೆ ಹೆಚ್ಚಿನ ಪರಿಹಾರ ಬಂದ ಕಾರಣ ಮಾತ್ರ ಈ ಮೇಲ್ಮನವಿ ಸಲ್ಲಿಸಿದ್ದೇನೆ ಎನ್ನುವುದು ನಿಜ. ಅದನ್ನು ಬಿಟ್ಟರೆ ಬೇರೆ ಯಾವುದೇ ಕಾರಣವಿಲ್ಲ ಎನ್ನುವುದು ನಿಜ. ನಾನು ಈ ಮೇಲ್ಮನವಿಯನ್ನು 5644 ದಿನಗಳ ವಿಳಂಬಕ್ಕೆ ಯಾವುದೇ ಸೂಕ್ತ ಕಾರಣ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಸರಿಯಾದ ನ್ಯಾಯಾಲಯದ ಶುಲ್ಕ ಕಟ್ಟದ ಕಾರಣ ಹೆಚ್ಚಿನ ಪರಿಹಾರ ಪಡೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಈಗಾಗಲೇ ಅಂತಿಮ ಪರಿಹಾರ ಪಡೆದಿದ್ದು, ನಾನು ಹೆಚ್ಚಿನ ಪರಿಹಾರ ಪಡೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಹೆಚ್ಚಿನ ಪರಿಹಾರ ಕೇಳಲು ಯಾವುದೇ ಹಕ್ಕು ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.